ಇದರಲ್ಲಿ ಯಾರ್ಯಾರು ಇರುತ್ತಾರೆ ಎಂಬುದನ್ನು ಈಗಾಗಲೇ ತಿಳಿಸಿದ್ದು, ಇದಕ್ಕೆ ಸಂಬಂಧಪಟ್ಟಂಥ ಆದೇಶವನ್ನು ಹೊರಡಿಸಿ ಅವರಿಗೆ ಕಳುಹಿಸಿಕೊಡುತ್ತೇವೆ. ಕುಡಿಯುವ ನೀರಿನ ಸಮಸ್ಯೆಯ ನಿವಾರಣೆಗೆ ಈ ಟಾಸ್ಕ್‌ಫೋರ್ಸ್ ಕಮಿಟಿ ಕಾರ್ಯೋನ್ಮುಖರಾಗುತ್ತಾರೆ. ಮತ್ತೆ ತಮ್ಮ ಅಧ್ಯಕ್ಷತೆಯಲ್ಲಿಯೇ ಈ ಕಮಿಟಿ ನಡೆಯುತ್ತದೆ. ಆದ್ದರಿಂದ, ಕುಡಿಯುವ ನೀರಿಗೆ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಆದ್ದರಿಂದ, ತಾವ್ಯಾರು ಆಂತಕ ಪಡೆದುಕೊಳ್ಳಬೇಕಾಗಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2854

ಸದಸ್ಯರ ಹೆಸರು : ಶ್ರೀ ಯೋಗೀಶ್ ಭಟ್ ಎನ್.

ಉತ್ತರಿಸುವ ಸಚಿವರು : ಶ್ರೀ ರಾಮಲಿಂಗಾರೆಡ್ಡಿ

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಅನುದಾನಿತ ಶಾಲಾ ಶಿಕ್ಷಕರಿಗೆ ವೇತನ ಪಾವತಿಯಲ್ಲಿ ವಿಳಂಬ ಉಂಟಾಗುತ್ತಿರುವುದು ನಿಜವೇ,	ಹೌದು.
ಆ)	ನಿಜವಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು,	2004–05ನೇ ಸಾಲಿನಲ್ಲಿ ಅನು ದಾನದ ಕೊರತೆಯಿಂದಾಗಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಸಿಬ್ಬಂದಿ ವರ್ಗಕ್ಕೆ ನವೆಂಬರ್ 2004 ಮಾಹೆಯಿಂದ ವೇತನ ಪಾವತಿಯಲ್ಲಿ ವಿಳಂಬವಾಗಿತ್ತು. ಆದರೆ 31–01–2005ರಲ್ಲಿ ಸರ್ಕಾರ ದಿಂದ ಈ ಉದ್ದೇಶಕ್ಕಾಗಿ ಒಟ್ಟು ರೂ. 135.21 ಕೋಟಿಗಳ ಹೆಚ್ಚುವರಿ ಅನು ದಾನ ಬಿಡುಗಡೆ ಮಾಡಿದೆ ಹಾಗೂ ಫೆಬ್ರವರಿ 2005ರವರೆಗಿನ ವೇತನ ಪಾವತಿಗೆ ಕ್ರಮ ವಹಿಸಲಾಗಿದೆ. ಕೆಲವು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಮಾತ್ರ ಫೆಬ್ರವರಿ 2005ರ ವೇತನಕ್ಕೆ ಕೊರತೆ

	ಪ್ರಶ್ನೆ	ಉತ್ತರ
		ಉಂಟಾಗಿದ್ದು, ಅನುದಾನ ಒದಗಿಸಲು ಆರ್ಥಿಕ ಇಲಾಖೆಯನ್ನು ಕೋರ ಲಾಗಿದೆ.
ಇ)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಅನು ದಾನಿತ ಶಾಲಾ ಶಿಕ್ಷರಿಗೆ ಪಾವತಿ ಮಾಡಬೇಕಾಗಿರುವ ವೇತನ ಬಾಕಿ ಹಣದ ಮೊತ್ತವೆಷ್ಟು,	ಒಟ್ಟು ರೂ. 120.90 ಲಕ್ಷ ರೂ.ಗಳು
ಈ)	ಹಾಗಿದ್ದರೆ ಆ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮ ಜರುಗಿ ಸುವುದೇ,	ರಾಜ್ಯದಲ್ಲಿಯ ಎಲ್ಲಾ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಅನು ದಾನ ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ. ಅನು ದಾನ ಒದಗಿಸಿದ ನಂತರ ಬಿಡುಗಡೆ ಮಾಡಲಾಗುವುದು.

ಉಪಾಧ್ಯಕ್ಷರು: ಮುಂದಿನ ಪ್ರಶ್ನೆ ಮಾನ್ಯ ಮನೋಹರ್ ಕಲ್ಲಪ್ಪ ಕಿನೇಕರ್‌ರವರು, ಮಾನ್ಯ ಸದಸ್ಯರು ಬಂದಿಲ್ಲವೆಂದು ಕಾಣುತ್ತದೆ. ಮುಂದಿನ ಪ್ರಶ್ನೆಯನ್ನು ಮಾನ್ಯ ಯೋಗೀಶ್‌ಭಟ್‌ರವರು ಕೇಳಿ.

ಶ್ರೀ ಎನ್. ಯೋಗೀಶ್‌ಭಟ್: ಸನ್ಮಾನ್ಯ ಉಪಾಧ್ಯಕ್ಷರೆ, ಶಿಕ್ಷಕರಿಗೆ ಸುಮಾರು 8–10 ತಿಂಗಳಿಂದ ಸಂಬಳ ಸಮಯಕ್ಕೆ ಸರಿಯಾಗಿ ಬಾರದೇ ಇರತಕ್ಕಂಥದ್ದರಿಂದ ಅವರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರಕ್ಕೆ ಮುಂಚಿತವಾಗಿ ಗೊತ್ತಾಗುವುದಿಲ್ಲವೇ? ಹಣ ಬಿಡುಗಡೆಯಾಗಿರುವುದಕ್ಕೆ ಆಗಿರತಕ್ಕಂಥ ವಿಳಂಬಕ್ಕೆ ಕಾರಣಗಳೇನು? ಮತ್ತೆ ಇನ್ನು ಎಷ್ಟು ಹಣ ಕೊಡಬೇಕಾಗಿರತಕ್ಕಂಥದು ಬಾಕಿ ಇದೆ?

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಹೋದ ವರ್ಷ ಈ ಸಮಸ್ಯೆ ಇತ್ತು. ಆದ್ದರಿಂದ ಮಾನ್ಯ ಯೋಗೀಶ್‌ಭಟ್‌ರವರು ಹೇಳಿರತಕ್ಕಂಥದು ನಿಜ. ನಮಗೆ ಎಷ್ಟು ಹಣದ ಅವಶ್ಯಕತೆ ಇದೆ ಎನ್ನತಕ್ಕಂಥ ಮಾಹಿತಿಯನ್ನು ನಮ್ಮ ಇಲಾಖೆಯಿಂದ ಸರಿಯಾದ ಲೆಕ್ಕ ಕೊಡದೆ ಇರುವುದರಿಂದ ಈ ರೀತಿಯಾಗಿ ತಪ್ಪಾಗಿದೆ. ಆದರೆ, ಈ ಬಾರಿ ಈ ರೀತಿಯ ತಪ್ಪಾಗುವುದಿಲ್ಲ. ಮತ್ತೆ ಈ ಸಾರಿಯ ಬಜೆಟ್‌ನಲ್ಲಿ

ಸುಮಾರು 480 ರಿಂದ 490 ಕೋಟಿ ರೂಪಾಯಿಗಳನ್ನು ಜಾಸ್ತಿ ತೋರಿಸಿದ್ದೇವೆ. ಇದರಲ್ಲಿ ಸುಮಾರು 250 ಕೋಟಿ ರೂಪಾಯಿಗಳಷ್ಟು ಸಂಬಳಕ್ಕೆ ಹಣ ಹೋಗುತ್ತದೆ. ಈ ವರ್ಷ ಆ ರೀತಿಯಾದ ಸಮಸ್ಯೆಯಾಗುವುದಿಲ್ಲವೆಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎನ್. ಯೋಗೀಶ್‌ಭಟ್: ಮಾನ್ಯ ಉಪಾಧ್ಯಕ್ಷರೆ, ನಾನು ಬಜೆಟ್ ಅದಿವೇಶನಕ್ಕೆ ಬರುವುದಕ್ಕಿಂಥ ಮುಂಚಿತವಾಗಿಯೇ ಶಿಕ್ಷಣ ಇಲಾಖೆಯಲ್ಲಿ ಸಂಬಂಧಪಟ್ಟವರನ್ನು ವಿಚಾರಿಸಿ ಕೊಂಡು ಬಂದಿದ್ದೇನೆ. ನನಗೆ ಬಂದ ಮಾಹಿತಿ ಪ್ರಕಾರ ನಿನ್ನೆ ದಿವಸದವರೆಗೆ ಪ್ರೌಢ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸುಮಾರು 3 ಕೋಟಿ ರೂಪಾಯಿಯವರೆಗೆ ಬಾಕಿ ಕೊಡತಕ್ಕಂಥದು ಇದೆ. ಆದರೆ, ಇವರು ಕೊಟ್ಟಿರತಕ್ಕಂಥದರಲ್ಲಿ 120–90 ಲಕ್ಷ ರೂಪಾಯಿ ಎಂದು ಹೇಳಿದ್ದಾರೆ. ಆದರೆ, ಸುಮಾರು 3 ಕೋಟಿ ರೂಪಾಯಿಗಳಷ್ಟು ಇನ್ನು ಬಾಕಿ ಕೋಡಬೇಕಾಗಿದೆ. ಆದ್ದರಿಂದ ಇಷ್ಟೊಂದು ತಾರತಮ್ಯ ಏತಕ್ಕಾಗಿ ಬರುತ್ತಿದೆ ಎಂದು ಮಾನ್ಯ ಸಚಿವರು ತಿಳಿಸಬೇಕು.

ಮತ್ತೆ ನನ್ನ ಎರಡನೇ ಪ್ರಶ್ನೆ ಏನೆಂದರೆ, ಆರ್ಥಿಕ ಇಲಾಖೆಯಿಂದ ಇಷ್ಟೊಂದು ವಿಳಂಬವಾಗಿ ಬರುವುದಕ್ಕೆ ಕಾರಣವೇನು ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ರಾಮಲಿಂಗರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಇಲಾಖೆಗೆ ಸಂಬಳದ ಅವಶ್ಯಕತೆ ಎಷ್ಟಿದೆ ಎಂದು ಕಳೆದ ವರ್ಷ ಕೊಟ್ಟಿರತಕ್ಕಂಥ ಮಾಹಿತಿಯಲ್ಲಿ ತಪ್ಪಾಗಿತ್ತು. ಈ ಒಂದು ಕಾರಣದಿಂದ ಈ ರೀತಿಯಾಗುವುದಕ್ಕೆ ಕಾರಣವಾಯಿತು. ಮುಂದಿನ ವರ್ಷ ಖಂಡಿತವಾಗಿ ಈ ರೀತಿಯಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಮುಂದಿನ ವರ್ಷದು ನಮಗೆ ಬೇಡ. ಇವತ್ತಿನವರೆಗೆ ಎಷ್ಟು ಬಾಕಿ ಇದೆ ಎಂಬುದನ್ನು ತಿಳಿಸಿ. ಏಕೆಂದರೆ, ನಮಗೆ ಹಣಕಾಸಿನ ತೊಂದರೆಯಿಲ್ಲವೆಂದು ಈಗ ತಾನೆ ಮಾನ್ಯ ಹಣಕಾಸಿನ ಸಚಿವರು ಇಲ್ಲಿ ಬೊಬ್ಬೆ ಹೊಡೆದು ಹೋದರು.

ಶ್ರೀ ಬಿ.ಎಸ್.ಯಡಿಯೂರಪ್ಪ : ಸರ್ ಮುಂದಿನ ವರ್ಷ ಬೇಡ, as on today ಎಷ್ಟು ಬಾಕಿ ಇದೆ, ನಮಗೇನು ಹಣಕಾಸಿನ ತೊಂದರೆ ಇಲ್ಲವೆಂದು ಈಗ ತಾನೇ ಹಣಕಾಸಿನ ಸಚಿವರು ಬೊಬ್ಬೆ ಹೊಡೆದು ಹೋದರು. ಆ ಬ್ಯಾಲೆನ್ಸ್‌ನ್ನು ಯಾವಾಗ ಪೇಮೆಂಟ್ ಮಾಡುತ್ತೀರಾ? ಮುಂದೆ ತೊಂದರೆಯಾಗುವುದಿಲ್ಲ, ಹಣ ಬಿಡುಗಡೆಯಾಗುತ್ತದೆ ಅದು ಆಯಿತು. ಈಗ ಬಾಕಿ ಎಷ್ಟು ಇದೆ, ಅವರು ಜೀವನವನ್ನು ಹೇಗೆ ಮಾಡಬೇಕು.

ಶ್ರೀ ಆರ್. ರಾಮಲಿಂಗಾರೆಡ್ಡಿ: ಕೆಲವು ಜಿಲ್ಲೆಗಳಲ್ಲಿ ಮಾತ್ರ ಫೆಬ್ರವರಿ ತಿಂಗಳ ವೇತನದಲ್ಲಿ ತೊಂದರೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬಾಕಿ ಎಷ್ಟು ಇದೆ ಹೇಳಿ ಸರ್.

ಶ್ರೀ ಆರ್. ರಾಮಲಿಂಗಾರೆಡ್ಡಿ: ತಮಗೆ ಬೇಕಾದರೆ ಎಲ್ಲಾ ಜಿಲ್ಲೆಗಳ ವಿವರ ನಾಳೆ ಕೊಡುತ್ತೇನೆ.

ಉಪಾಧ್ಯಕ್ಷರು: ನಾಳೆ ವಿವರವನ್ನು ಕೊಡುತ್ತಾರೆಂದು ಹೇಳಿದ್ದಾರೆ.

ಶ್ರೀ ಆರ್. ರಾಮಲಿಂಗಾರೆಡ್ಡಿ: ಏನು ಬಾಕಿ ಇಲ್ಲಾ, ಬಹುತೇಕವಾಗಿ ಎಲ್ಲವನ್ನು ಕೊಟ್ಟಿದ್ದೇವೆ. 135 ಕೋಟಿ ರೂ. ಗಳು ಜನವರಿ ತಿಂಗಳಲ್ಲಿ ರಿಲೀಸ್ ಆಯಿತು. ಇದು ಕೆಲವು ಕಡೆ ಮಾತ್ರ ಆಗಿದೆ. ಆದರೆ ಮುಂದಿನ ವರ್ಷ ಯಾವ ಟೀಚರ್ ಗೂ ಸಂಬಳ ಇಲ್ಲವೆನ್ನುವ ಪ್ರಶ್ನೆಯೇ ಬರುವುದಿಲ್ಲ. ಎಲ್ಲಾ ಕಡೆ ಕ್ಲಿಯರ್ ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಬಾಕಿ ಎಲ್ಲವನ್ನು ಯಾವಾಗ ಪೂರ್ತಿಯಾಗಿ ಕೊಟ್ಟು ಅವರು ನೆಮ್ಮದಿಯಿಂದ ಜೀವನ ಮಾಡಿ ಶಾಲೆಗೆ ಹೋಗಿ ಪಾಠ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ ಸ್ವಾಮಿ.

ಶ್ರೀ ಆರ್. ರಾಮಲಿಂಗಾರೆಡ್ಡಿ: ಅದು ಎಫ್ ಡಿ ಯಲ್ಲಿದೆ, ಬೆಳಿಗ್ಗೆ ಕೂಡ ನಮ್ಮ ಕಾರ್ಯದರ್ಶಿಗಳ ಜೊತೆಯಲ್ಲಿ ಮಾತನಾಡಿದ್ದೇವೆ.

ಶ್ರೀ. ಬಿ.ಎಸ್. ಯಡಿಯೂರಪ್ಪ: ಫಸ್ಟ್ ವೀಕ್‌ನಲ್ಲಿ ಅವರ ಸಂಬಳ ಬರುವಂತೆ ಮಾಡುತ್ತೀರಾ?

ಶ್ರೀ ಆರ್. ರಾಮಲಿಂಗಾರೆಡ್ಡಿ: ಸಮಸ್ಯೆ ಏನು ಇಲ್ಲ, ಅದನ್ನು ಮಾಡಿಕೊಡುತ್ತೇವೆ. ಮುಂದಿನ ವರ್ಷದಿಂದ ಯಾರೂ ಪ್ರಶ್ನೆ ಕೇಳುವಂಥದ್ದು ಉದ್ಭವವಾಗುವುದಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ನೀವು ದುಡ್ಡು ಬಿಡುಗಡೆ ಮಾಡಿದ ಮೇಲೆ ನಿಮ್ಮ ಬಿಇಒ ಆಫೀಸಿನಲ್ಲಿ ಆ ಬಿಲ್ಲಿಗೆ ಸಹಿ ಮಾಡಲಿಕ್ಕೆ ಇಟ್ಟುಕೊಂಡು ಕೂಡುತ್ತಾರೆ. ಇದು ಎಲ್ಲಾ ಕಡೆ ನಡೆಯುತ್ತಿದೆ. ಅಂತಹ ಅಧಿಕಾರಿಗಳ ಮೇಲೆ ನೀವು ಯಾವ ಕ್ರಮ ಕೈಗೊಳ್ಳುತ್ತೀರಿ, ಏಕೆಂದರೆ, ಆ ಶಿಕ್ಷಕರುಗಳು ಬಂದು ದುಡ್ಡು ಕೊಡುವವರೆಗೆ ಅವರು ಆ ಬಿಲ್‌ನ್ನು ಪಾಸ್ ಮಾಡಿಕೊಡುವುದಿಲ್ಲ.

ಶ್ರೀ ಆರ್. ರಾಮಲಿಂಗಾರೆಡ್ಡಿ: ಆ ರೀತಿ ಟೀಚರ್ಸ್ ಹತ್ತಿರ ಬಿಇಓಗಳೂ ದುಡ್ಡು ತೆಗೆದುಕೊಳ್ಳುತ್ತಾರೆಂದು ಯಾರಾದರೂ ನನ್ನ ಗಮನಕ್ಕೆ ತಂದರೆ ಖಂಡಿತ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ರಾಜೇಂದ್ರನ್: ಅವರ ಮೇಲೆ ನೀವು ಆಕ್ಷನ್ ತೆಗೆದುಕೊಳ್ಳಬೇಕು. ಇದು ನಿಜವಾಗಲೂ ನಡೆಯುತ್ತಿರುವಂಥದ್ದು:

ಶ್ರೀ ಆರ್. ರಾಮಲಿಂಗಾರೆಡ್ಡಿ: ಕೆಲವು ವಿಷಯಗಳ ಜೊತೆಗೆ ಇದು ನನ್ನ ಗಮನಕ್ಕೆ ಬಂದಿದೆ, ಹೋದ ಕಡೆ ಎಲ್ಲಾ ನಾನು ರಿವ್ಯೂ ಮೀಟಿಂಗ್ಸ್ ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅವರಿಗೆ ಬಿಲ್ ಬಂದಿದ್ದು ಯಾವಾಗ? ಅವರು ಯಾವಾಗ ಸಹಿ ಮಾಡಿ ಕಳುಹಿಸಿದ್ದಾರೆ, ಇದು ಏಕೆ ಡಿಲೇ ಅಯಿತು; ಇನ್ ಫಾರ್ಮೇಶನ್ ತೆಗೆದುಕೊಂಡರೆ ಅದರ ಬಗ್ಗೆ ತಮಗೇ ಗೊತ್ತಾಗುತ್ತದೆ.

ಶ್ರೀ ಆರ್. ರಾಮಲಿಂಗಾರೆಡ್ಡಿ: ಅದನ್ನು ಕೂಡ ಮಾಡಿಸೋಣ. ಈ ಸಲದ ಸಂಬಳವನ್ನು ತೆಗೆದುಕೊಳ್ಳಲಿ, ಇದರ ಬಗ್ಗೆ ಬೇಕಾದರೆ ಮುಂದಿನ ಸಂಬಳಕ್ಕೆ ಒಂದು ಡೈರೆಕ್ಷನ್ ಕೊಡೋಣ.

ಶ್ರೀ ಎನ್. ಯೋಗೀಶ್ ಭಟ್: ಪ್ರೌಢಶಾಲೆಯ ಶಿಕ್ಷಣಕ್ಕೆ ಸಂಬಂಧಪಟ್ಟಂತೆ 134.29 ಲಕ್ಷ ಇನ್ನು ಬಾಕಿ ಇದೆ, ನೀವು ಕೊಟ್ಟಿರುವುದು 1.23 ಕೋಟಿ ರೂ.ಗಳೂ ಅಲ್ಲ, ಒಟ್ಟು 3 ಕೋಟಿಗೆ ಸಮೀಪವಿದೆ. ಫಸ್ಟ್ ವೀಕ್ ನಲ್ಲಿ ರಿಲೀಸ್ ಆಗುತ್ತದೆಂದು ನಾವು ಹೇಳಬಹುದಲ್ಲವೆ? ಏಪ್ರಿಲ್ ತಿಂಗಳಲ್ಲಿ ಎಲ್ಲ ರಿಲೀಸ್ ಆಗುತ್ತದೆಂದು ಹೇಳಬಹುದು.

ಶ್ರೀ ಆರ್. ರಾಮಲಿಂಗಾರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ಮಾಡಿಸೋಣ.

ಶ್ರೀ. ಜೆ.ಸಿ.ಮಾಧುಸ್ವಾಮಿ: ಸಂಸ್ಕೃತ ಟೀಚರ್ಸ್ ಗೆ ನೀವು ಸ್ಯಾಲರಿ ಕೊಡಲೇ ಇಲ್ಲ. 6–7 ತಿಂಗಳಿನಿಂದ ಸ್ಯಾಲರಿ ಇಲ್ಲ ಅವರಿಗೆ, ಆ ವಿಷಯದ ಬಗ್ಗೆ ಹೋದ ಸಲ ಕೂಡ ಮಾತನಾಡಿರುತ್ತೇವೆ. ಅದನ್ನು ಸ್ವಲ್ಪ ಮಾಡುವುದಕ್ಕಾಗುತ್ತದೆಯೆ?

ಶ್ರೀ ಆರ್. ರಾಮಲಿಂಗಾರೆಡ್ಡಿ: 150 ಪೋಸ್ಟ್ ಗಳಿಗೆ ನ್ಯಾಚುರಲ್ ಗ್ರೋಥ್ ನಲ್ಲಿ ಕೊಟ್ಟುಬಿಟ್ಟಿದ್ದರು. ಆದರೆ ಎಫ್ ಡಿ ಯಿಂದ ಅವರು ಕನ್‌ಕರೆನ್ಸ್ ತೆಗೆದುಕೊಂಡಿರಲಿಲ್ಲ. ಆದರೆ ಅದು ರಿಲೀಸ್‌ಗೆ ಒಂದು ವಾರವಾಯಿತು. ಒಟ್ಟು 230 ಲಕ್ಷ ರೂ.ಗಳಲ್ಲಿ 150 ಲಕ್ಷ ರೂ.ಗಳು ಬಿಡುಗಡೆಯಾಗಿದೆ, ಇನ್ನು 70–80 ಲಕ್ಷ ರೂ.ಗಳೂ ಮಾತ್ರ ಬಿಡುಗಡೆಯಾಗಬೇಕು. ಅದು ಕ್ಲಿಯರ್ ಆಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಟೀಚ್ ಮಾಡುವವರಿಗೆ ಸ್ಯಾಲರಿ ಕೊಟ್ಟಿಲ್ಲವೆಂದರೆ ಹೇಗೆ ಸ್ವಾಮಿ? ಅವರಿಗೆ ಒಂದು ವರ್ಷದವರೆಗೆ ಸಂಬಳ ಕೊಡದಿದ್ದರೆ ಹೇಗೆ? ಅವರು ಹೇಗೆ ಕೆಲಸ ಮಾಡುತ್ತಾರೆ.

ಶ್ರೀ. ಆರ್. ರಾಮಲಿಂಗಾರೆಡ್ಡಿ: ನ್ಯಾಚುರಲ್ ಗ್ರೋಥ್ ನಲ್ಲಿ ಅಪ್ರೂವಲ್ ಮಾಡಿ ಬಿಟ್ಟಿದ್ದರು, ಅದಕ್ಕಾಗಿ ಇದರ ಬಗ್ಗೆ ಸ್ವಲ್ಪ ಸಮಸ್ಯೆಯಾಗಿತ್ತು, ಅದರ ಬಗ್ಗೆ ಈಗ ಏನು ಸಮಸ್ಯೆ ಇಲ್ಲ; ಆಗಿದೆ.

ಶ್ರೀ ಎಸ್. ರಾಜೇಂದ್ರನ್: ನಾವು ಮೊನ್ನೆ ಭಾಷಣವನ್ನು ಮಾಡಿದಾಗ ಹೇಳಿದೆ, ಅವರು ಅಂದು ಇರಲಿಲ್ಲ, ಸಂಬಳ ಕೊಡದೆ ಒಂದು ವರ್ಷವಾಗಿದೆ. ಒಂದು ಏನಾಗಿದೆ ಎಂದರೆ ಇನ್ನುವರೆಗೆ ಕೊಟ್ಟಿಲ್ಲ. ಎಕ್ಸೆಸ್ ಟೀಚರ್ಸ್ ಏನು ಇದ್ದಾರೆ, ಅದು ಅವರ ತಪ್ಪಲ್ಲ. ಅದನ್ನು ಸರಿಪಡಿಸುವುದು ಯಾರು? ಅದನ್ನು ಆ ಟೀಚರ್ಸ್ ಗಳು ಸರಿಪಡಿಸಿಕೊಳ್ಳಬೇಕೆ?

ಶ್ರೀ ಆರ್. ರಾಮಲಿಂಗಾರೆಡ್ಡಿ: ಕರೆಕ್ಟಾಗಿ ನಾನು ಅವರಿಗೆ ಆನ್ಸ್ವರ್ ಕೊಟ್ಟಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಎಡೆಡ್ ಸ್ಕೂಲ್ ನಲ್ಲಿ ಇಷ್ಟು ಸ್ಟೂಡೆಂಟ್ಸ್ ಗೆ ಇಂತಿಷ್ಟು ಶಿಕ್ಷಕರು ಇರಬೇಕೆಂದು ಅವರೆ ಒಂದು ಮಾನದಂಡವನ್ನು ನಿಗದಿ ಮಾಡಿಬಿಟ್ಟು ಟೀಚರ್ಸ್ ಎಕ್ಸೆಸ್ ಇದ್ದೀರಿ, ಸ್ಯಾಲರಿ ಕೊಡುವುದಿಲ್ಲವೆಂದು ದಿಢೀರ್ ಎಂದು ನಿಲ್ಲಿಸಿಬಿಟ್ಟರೆ ಆ ಟೀಚರ್ ಗಳು ಏನು ಮಾಡಬೇಕು. ಅಪ್ರೂಡ್ ಸ್ಕೂಲ್, ಏಡೆಡ್ ಸ್ಕೂಲ್ ಅವರು ಇಲ್ಲಿಯವರೆಗೆ ಪಾಠವನ್ನು ಮಾಡಿದ್ದಾರೆ. ನೀವು ಅವರನ್ನು ಎಲ್ಲಿಯಾದರೂ ಚೇಂಜ್ ಮಾಡಿ ರಿಹ್ಯಾಬಿಲಿಟೇಟ್ ಮಾಡಬೇಕಾಗಿತ್ತು, ಮಾಡಲಿಲ್ಲ. ಸಂಬಳವನ್ನು ನಿಲ್ಲಿಸಿಬಿಟ್ಟಿದ್ದೇವೆಂದು ನಿಮ್ಮ ಬಿಇಓಗಳು ಒಂದು ಎಂಡಾರ್ಸೆಮೆಂಟ್ ನಿಮಗೆ ಕೊಟ್ಟುಬಿಟ್ಟಿದ್ದಾರೆ. ಅದು ಅವರ ತಪ್ಪಲ್ಲ, ಮಾನ್ಯ ವಿಶ್ವನಾಥರವರು ಇದ್ದಾಗ ಒಂದು ಡಿಸಿಷನ್ ತೆಗೆದುಕೊಂಡಿದ್ದರು, ಅವರನ್ನು ಬೇರೆ ಶಾಲೆಗಳಿಗೆ ವರ್ಗಾಯಿಸುತ್ತೇವೆ ಎಂದು, ಅದನ್ನು ಕೂಡ ಸರ್ಕಾರವೇ ನಿರ್ಧಾರ ಮಾಡಿ ಅದನ್ನು ಮಾಡಿ ಸ್ಟಾಪ್ ಮಾಡಿರುತ್ತದೆ. ಆ ಮೇಷ್ಟ್ರುಗಳಿಗೆ ಸಂಬಳ ಕೊಡದಿದ್ದರೆ ಅವರು ಎಲ್ಲಿ ಹೋಗಬೇಕೆಂದು ಸಭೆಗೆ ಮಾನ್ಯ ಮಂತ್ರಿಗಳು ಹೇಳಬೇಕಲ್ಲವೆ? ದಿಢೀರ್ ಎಂದು ವರ್ಷದ ಎಂಡ್ ನಲ್ಲಿ ಸ್ಟ್ರೆಂಥ್ ಇಲ್ಲವೆಂದು ಸಂಬಳವನ್ನು ನಿಲ್ಲಿಸಿಬಿಟ್ಟರೆ ಹಾಗಾದರೆ ಅವರು ಎಲ್ಲಿಗೆ ಹೋಗಬೇಕು.

ಶ್ರೀ ಆರ್. ರಾಮಲಿಂಗಾರೆಡ್ಡಿ: ನಾನು ಅಪ್ಪರ್ ಹೌಸ್ ನಲ್ಲಿ ಮೊನ್ನೆ ಒಂದು ಪ್ರಶ್ನೆಗೆ ಉತ್ತರವನ್ನು ಕೊಟ್ಟಿರುತ್ತೇವೆ. ನಾಲ್ಕು ಶಾಲೆಗಳನ್ನು ನಾವು ಮುಚ್ಚಿರುತ್ತೇವೆ. 4 ಶಾಲೆಗಳನ್ನು ಏಕೆ ಮುಚ್ಚಿದ್ದೇವೆಂದರೆ 100 ವಿದ್ಯಾರ್ಥಿಗಳೂ ಇಲ್ಲ. 20 ಜನ ಸ್ಟಾಪ್ ಇದ್ದಾರೆ. ಯಾವ ಒಂದು ಶಾಲೆಯಲ್ಲಿ 25 ಜನ ವಿದ್ಯಾರ್ಥಿಗಳೂ ಇರಲಿಲ್ಲ. ಆ ಶಾಲೆಗಳನ್ನು ನಡೆಸಿಕೊಂಡು ಏನು ಪ್ರಯೋಜನ. 20 ಸ್ಟಾಪ್‌ಗೆ ಸ್ಯಾಲರಿ ಎಷ್ಟಾಗುತ್ತದೆಂದು ಲೆಕ್ಕವನ್ನು ಹಾಕಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಆ ಟೀಚರ್ಸ್ ಗಳನ್ನು ಬೇರೆ ಶಾಲೆಗೆ ಹಾಕಿ ನಾವು ತಕರಾರು ಮಾಡುವುದಿಲ್ಲ. ಅವರು ಶಾಲೆಯಲ್ಲಿ ಇದ್ದಾರೆ. ವರ್ಕ್ ಮಾಡುತ್ತಿದ್ದಾರೆ. 8 ಜನರಿಗೆ ಸಂಬಳ ಕೊಟ್ಟು 9 ಜನ ಎಕ್ಸೆಸ್ ಟೀಚರ್ಸ್ ಎಂದು ಸಂಬಳವನ್ನು ನಿಲ್ಲಿಸಿರುತ್ತೀರಿ.

ಶ್ರೀ ಆರ್. ರಾಮಲಿಂಗಾರೆಡ್ಡಿ: ಸುಮಾರು 2000 ಜನರಿಗೆ ಆ ತರಹದ ಒಂದು ಸಮಸ್ಯೆ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: you must tell...

ಶ್ರೀ ಆರ್. ರಾಮಲಿಂಗಾರೆಡ್ಡಿ: ನೀವು ಹೇಳುವುದು ಏಡೆಡ್ ಶಾಲೆಗಳಿಗೆ ಬೇರೆ ಕಡೆ ವರ್ಗಾಯಿಸಿ ಎಂದು.

ಶ್ರೀ ಜೆ.ಸಿ. ಮಾಧುಸ್ವಾಮಿ: ನೀವು ಏನಾದರೂ ಮಾಡಿ ಸರ್, ಮೊದಲು ಅವರಿಗೆ ಸಂಬಳವನ್ನು ಕೊಡಿ, ಈಗ ಅವರು ಟೀಚರ್ಸ್ ಅಲ್ಲವೆ? ಅವರಿಗೆ ನೀವು ಸಂಬಳವನ್ನು ಕೊಡಿ.

ಶ್ರೀ ಆರ್. ರಾಮಲಿಂಗಾರೆಡ್ಡಿ: ನಾನು ಮತ್ತು ಮಾನ್ಯ ಡಿ. ಮಂಜುನಾಥ್ ರವರು ಕೂಡಿಕೊಂಡು ಒಂದು ಡಿಸಿಷನ್‌ಗೆ ಬಂದಿರುತ್ತೇವೆ. ಕ್ಯಾಬಿನೆಡ್ ಗೆ ಸಬ್ಜಕ್ಟೆ ಬರುತ್ತಿದೆ. ಕ್ಯಾಬಿನೆಟ್‌ಗೆ ಎಕ್ಸ್‌ಸ್ ಟೀಚರ್ಸ್‌ಗಳನ್ನು ಏನು ಮಾಡಬೇಕೆಂದು ಸಬ್ಜೆಕ್ಟ್ ಬರುತ್ತಿದೆ.

ಶ್ರೀ ಎಸ್. ರಾಜೇಂದ್ರನ್: ಅವರಿಗೆ ಒಂದು ವರ್ಷವಾಗಿದೆ ಸಂಬಳವಿಲ್ಲದೆ, ಅವರು ಹೊಟ್ಟೆ ಮತ್ತು ಬಟ್ಟೆಗೆ ಏನು ಮಾಡಬೇಕು.

ಶ್ರೀ ಆರ್. ರಾಮಲಿಂಗಾರೆಡ್ಡಿ: ನೀವು ಸಂಕ್ಷಿಪ್ತವಾಗಿ ಯಾವ ಶಾಲೆ ಎಂದು ತಾವು ಹೇಳಿಬಿಡಿ.

ಶ್ರೀ ಎಸ್. ರಾಜೇಂದ್ರನ್: ನೀವು ತಿಳಿದುಕೊಂಡು ಬಿಡಿ, ಸ್ವಾಮಿ ಅವರಿಗೆ ಸಂಬಳವನ್ನು ಕೊಡಬೇಕಲ್ಲವೆ?

ಶ್ರೀ ಡಿ.ಆರ್. ಪಾಟೀಲ್: ಸರ್ ಈ ರೀತಿ ಹಿಂದೆ ಎಕ್ಸೆಸ್ ಟೀಚರ್ ಆದವರನ್ನು ಬೇರೆ ಸ್ಕೂಲ್ ಗಳಿಗೆ ಅಡ್ಜಸ್ಟ್ ಮಾಡಿದ್ದರು. ಅದೇ ರೀತಿ ತಾವು ಮಾಡಿ ಸರ್. ಪಾಪ ಅವರು ಸಂಬಳವಿಲ್ಲದೆ ಹೇಗೆ ಬದುಕಬೇಕು.

ಶ್ರೀ ಆರ್. ರಾಮಲಿಂಗಾರೆಡ್ಡಿ: ಈ ರೀತಿ ಮುಚ್ಚುವಂಥ ಶಾಲೆಗಳಿಗೆ ಬೇರೆ ಶಾಲೆಗಳಿಗೆ ಈ ಟೀಚರ್ಸ್ ಗಳನ್ನು ವರ್ಗಾವಣೆ ಮಾಡಿ ಎಂದು ಕೇಳುತ್ತಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರನ್ನು ಎಕ್ಸೆಸ್ ಎಂದು ಕನ್ಸಿಡರ್ ಮಾಡಬಾರದು.

ಶ್ರೀ ಆರ್. ರಾಮಲಿಂಗಾರೆಡ್ಡಿ: ಅಂದರೆ ಅವರನ್ನು ಬೇರೆ ಶಾಲೆಗಳನ್ನು ವರ್ಗಾವಣೆ ಮಾಡಿ ಎಂದು ಹೇಳುತ್ತಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಚೇಂಜ್ ಮಾಡಿ, ನಮ್ಮದೇನು ತಕರಾರು ಇಲ್ಲ. ಅವರಿಗೆ ಸ್ಯಾಲರಿ ಗ್ಯಾರಂಟಿ ಇರಬೇಕು.

ಶ್ರೀ ಆರ್. ರಾಮಲಿಂಗಾರೆಡ್ಡಿ: ಓಕೆ ಮಾಡೋಣ ಬಿಡಿ.